**ಪಾಠ–2** **ಜುಲೈ 3 ರಿಂದ 9**

# ಅಸಮಾಧಾನ ಮತ್ತು ತಿರುಗಿ ಬೀಳುವಿಕೆ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : **ಆ.ಕಾಂಡ 11:1–33, ಆ.ಕಾಂಡ 12:1–13, ಆ.ಕಾಂಡ 13:27–33, ಆ.ಕಾಂಡ 14:1–23, 1 ಕೊರಿಂಥ 10:1–11, ಆ.ಕಾಂಡ 14:39–45.**

**ಸ್ಮರಣವಾಕ್ಯ : "ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನ ರೂಪವಾಗಿವೆ; ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದವೆ"** (1 ಕೊರಿಂಥ 10:11).

ಕೆಲವು ಶತಮಾನಗಳಿಂದಲೂ ಅನೇಕ ಜನರು ದೊಡ್ಡ ದೊಡ್ಡ ಭೂಕಂಪಗಳಾಗುವ ಮೊದಲು ನಾಯಿಗಳು ಮತ್ತು ಇತರೆ ಸಾಕು ಪ್ರಾಣಿಗಳಲ್ಲಿ ವಿಚಿತ್ರವಾದ ಅವಿಶ್ರಾಂತತೆಯ ವರ್ತನೆಯ ಬಗ್ಗೆ ವರದಿ ಮಾಡಿದ್ದಾರೆ.

ಪ್ರಾಣಿಗಳು ಭೂಕಂಪದ ಅಲೆಗಳನ್ನು (ಒತ್ತಡಅಲೆ) ಮೊದಲಿಗೆ ಕಂಡು ಹಿಡಿಯುತ್ತವೆ ಎಂಬುದನ್ನು ವಿಜ್ಞಾನಿಗಳು ಸ್ಥಾಪಿಸಿದ್ದಾರೆ. ಇದು ಪ್ರಾಣಿಗಳು ಭೂಮಿಯು ಅಲ್ಲಾಡುವುದಕ್ಕಿಂತ ಸ್ವಲ್ಪ ಮುಂಚೆ ಯಾಕೆ ಗೊಂದಲಪಟ್ಟುಕೊಂಡು ಅತ್ತ ಇತ್ತ ಗಾಬರಿಯಿಂದ ವರ್ತಿಸುತ್ತವೆ ಎಂಬುದನ್ನು ವಿಜ್ಞಾನಿಗಳ ವರದಿ ವಿವರಿಸುತ್ತದೆ. ಆನೆಗಳಂತಹ ಪ್ರಾಣಿಗಳು ಬಹಳ ಕಡಿಮೆ ಆವರ್ತನೆ ಹೊಂದಿರುವ ಶಬ್ದದ ಅಲೆಗಳನ್ನು ಗ್ರಹಿಸಿಕೊಳ್ಳುತ್ತವೆ. ಆದರೆ ಮನುಷ್ಯರು ಈ ಕಂಪನಗಳನ್ನು ಗ್ರಹಿಸಿಕೊಳ್ಳಲಾರರು.

---

* **ಜುಲೈ 10ರ ಸಬ್ಬತ್ತಿನ ಸಿದ್ಧತೆಗಾಗಿ ಈ ವಾರದ ಪಾಠವನ್ನು ಅಧ್ಯಯನ ಮಾಡಿರಿ.**

ದಿನಾಂಕ 23.08.2011ರಂದು ಅಮೇರಿಕಾದ ವಾಶಿಂಗ್‌ಟನ್ ಡಿ.ಸಿ. ಪಟ್ಟಣವು 5.8 ಸಿಸ್‌ಮಿಕ್ ಅಲೆಯಿಂದ ಅಲ್ಲಾಡಿಸಿದ ಕೆಲವು ನಿಮಿಷದ ಮೊದಲು ರಾಷ್ಟ್ರೀಯ ಪ್ರಾಣಿ ಸಂಗ್ರಹಾಲಯದ ಕೆಲವು ಪ್ರಾಣಿಗಳು ವಿಚಿತ್ರವಾಗಿ ವರ್ತಿಸಿದವು. ಅವುಗಳಲ್ಲಿ ಲೆಮ್ಯೂರ್‌ಗಳು, ಭೂಮಿಯು ಅಲ್ಲಾಡಿದ ಹದಿನೈದು ನಿಮಿಷಗಳ ಮೊದಲೇ ಗಟ್ಟಿಯಾಗಿ ಕಿರಿಚ ತೊಡಗಿದ್ದವು.

ಈ ವಾರದ ಅಧ್ಯಯನದಲ್ಲಿ ಮನುಷ್ಯನಲ್ಲಿ ಕಂಡುಬರುವ ಕೆಲವು ಅವಿಶ್ರಾಂತತೆಯ ವಿಚಿತ್ರ ವರ್ತನೆಯ ಉದಾಹರಣೆಗಳನ್ನು ನೋಡುವವರಾಗಿದ್ದೇವೆ. ಈ ವರ್ತನೆಗಳು ಪ್ರಾಕೃತಿಕ ವಿಕೋಪಗಳಾದ ಭೂಕಂಪಗಳಂಥವುಗಳಿಂದ ಉಂಟಾಗದೆ, ಕ್ರಿಸ್ತನು ನಂಬಿಕೆಯಿಂದಲೂ ವಿಧೇಯತ್ವದಿಂದಲೂ ಬರುವವರಿಗೆ ಕೊಡುವಂತಹ ವಿಶ್ರಾಂತಿಯಲ್ಲಿ ನೆಲೆಯಾಗಿರದ ಬಿದ್ದುಹೋದ ಮನುಷ್ಯನ ಪಾಪ ಸ್ವಭಾವದ ಮೂಲವೇ ಇದಕ್ಕೆ ಕಾರಣವಾಗಿದೆ.

**ಭಾನುವಾರ** **ಜುಲೈ 4**

## ಅಡವಿಯಲ್ಲಿ ಅವಿಶ್ರಾಂತತೆ

ಇಸ್ರಾಯೇಲ್ಯರು ಕಾನಾನ್ ದೇಶದ ಮಾರ್ಗದಲ್ಲಿ ಸಿನಾಯಿ ಬೆಟ್ಟವನ್ನು ಬಿಟ್ಟು ಬರುವಾಗ ಅವರಿಗೆ ಬೇಸರವನ್ನೂ ಅವಿಶ್ರಾಂತಿಯನ್ನೂ ಅನುಭವಿಸಿರಬಹುದು. ಅವರು ಐಗುಪ್ತವನ್ನು ಬಿಟ್ಟು ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲವು ಕಳೆದಿತ್ತು (ಅ.ಕಾಂಡ 1:1) ಅವರು ವಾಗ್ದತ್ತ ದೇಶವನ್ನು ಪ್ರವೇಶಿಸಲು ಸಿದ್ಧರಾಗಿದ್ದರು. ಅದಕ್ಕಾಗಿ ಅವರನ್ನು ಲೆಕ್ಕಿಸಿ ಸಂಘಟಿಸಲಾಗಿತ್ತು (ಒಂದುಗೂಡಿಸಲಾಗಿತ್ತು). ಅವರು ನಂಬಲು ಅಸಾಧ್ಯವಾದ ದೈವೀಕ ಅನುಗ್ರಹಗಳು ಮತ್ತು ದೇವರ ಪ್ರಸನ್ನತೆಯ ನಿಚ್ಚಳ ಸೂಚನೆಗಳು ಅವರಿಗೆ ತೋರಿಸಲ್ಪಟ್ಟವು. ಆದಾಗ್ಯೂ ಅವರು ಸಿನಾಯಿ ಬೆಟ್ಟವನ್ನು ಬಿಟ್ಟು ಬರುವಾಗ ಅವರಿಗೆ ಬೇಸರವಾಗಿ ಕಂಡುಬಂತು.

ಅರಣ್ಯಕಾಂಡ 11ನೇ ಅಧ್ಯಾಯ 1 ರಿಂದ 15 ವಚನಗಳನ್ನು ಓದಿರಿ. ಇಲ್ಲಿ ಇಸ್ರಾಯೇಲ್ಯರು ಯಾವುದರ ಬಗ್ಗೆ ಗುಣುಗುಟ್ಟಿದರು? ಅವರು ಮಾಂಸವನ್ನು ಆಶಿಸಿದರು. ಐಗುಪ್ತದೇಶದಲ್ಲಿ ಬಿಟ್ಟಿಯಾಗಿ ತಿನ್ನುತ್ತಿದ್ದ. ಮೀನು, ಸವತೆಕಾಯಿ, ಈರುಳ್ಳಿ ಬೆಳ್ಳುಳ್ಳಿ ಇವುಗಳನ್ನು ನೆನಪಿಸಿಕೊಂಡರು. "ನಮಗೆ ಮಾಂಸವನ್ನು ತಿನ್ನುವುದಕ್ಕೆ ಕೊಡುವವರ್‍ಯಾರು? ಇಲ್ಲಿಯಾದರೋ ನಮ್ಮ ಜೀವ ಬತ್ತಿಹೋಯಿತು; ಈ ಮನ್ನವೇ

ಹೊರತು ಇನ್ನೇನೂ ಸಿಕ್ಕಲಿಲ್ಲ ಅಂದುಕೊಳ್ಳುತ್ತಿದ್ದರು (ಅ.ಕಾಂಡ 11:4–6). ಅವರು ಕೆಲವು ವಸ್ತುಗಳ ಮೇಲೆ ಆಯ್ಕೆಯ ಭಾಗವನ್ನು ನೆನಪಿನಲ್ಲಿ ಇರಿಸಿಕೊಂಡು ನರಳುತ್ತಿದ್ದರು. ಹಾಗಾಗಿ ಆಹಾರಕ್ಕೋಸ್ಕರ ದಾಸತ್ವವನ್ನು ಅದರ ಕಷ್ಟ ಸಂಕಟಗಳನ್ನೂ ಮರೆತರು. ಅವರು ಒಂದು ವರ್ಷಕ್ಕಿಂತಲೂ ಹೆಚ್ಚು ಕಾಲ ದೇವರು ಕೊಟ್ಟ ಮುನ್ನವನ್ನು ತಿಂದಿದ್ದರು ಆದಾಗ್ಯೂ ಅವರು ವಿಶ್ರಾಂತಿಯನ್ನು ಕಂಡುಕೊಳ್ಳದೆ ಮತ್ಯಾವುದನ್ನೋ ಆಶಿಸಿದರು. ಆವಾಗ ಮೋಶೆಗೆ ಸಹ ಅದರ ಪರಿಣಾಮ ಬೀರಿತು. ಮನಶ್ಶಾಂತಿಯನ್ನು ಕಳೆದುಕೊಂಡ ಜನ ಸಮೂಹವನ್ನು ಮುನ್ನಡೆಸುವುದು ಸುಲಭದ ಕೆಲಸವಲ್ಲ. ಆದರೆ ಅವನಿಗೆ ಯಾರನ್ನು ಆತುಕೊಳ್ಳಬೇಕೆಂಬುದು ಗೊತ್ತಿತ್ತು. "ಆಗ ಮೋಶೆ ಯೆಹೋವನಿಗೆ ಈ ಜನರನ್ನು ನಡೆಸುಕೊಂಡು ಹೋಗುವ ಭಾರವನ್ನು ನನ್ನ ಮೇಲೆ ಹೊರಿಸಿ ನೀನು ನಿನ್ನ ದಾಸನಿಗೆ ಅಪಕಾರ ಮಾಡುತ್ತೀಯೆ? ನಿನ್ನ ದಯೆಗೆ ನಾನು ಯಾಕೆ ಅಪಾತ್ರನಾದೆ? ನೀನು ನನಗೆ ಕೂಸನ್ನು ಎತ್ತಿಕೊಂಡು ಹೋಗುವವನಂತೆ ಈ ಜನವನ್ನು ಉಡಿಲಲ್ಲಿಟ್ಟುಕೊಂಡು ನಾನು ಅವರ ಪಿತೃಗಳಿಗೆ ಪ್ರಮಾಣ ಮಾಡಿಕೊಟ್ಟ ದೇಶಕ್ಕೆ ಒಯ್ಯಿ ಎಂದು ಹೇಳುತ್ತೀಯಲ್ಲಾ" (ಅ.ಕಾಂಡ 11:11). ದೇವರು ಮೋಶೆಯು ಮಾಡಿದ ದೂರಿಗೆ ಹೇಗೆ ಪ್ರತಿಕ್ರಿಯೆ ನೀಡಿದನು? ಅರಣ್ಯಕಾಂಡ 11:16–33 ವಚನಗಳನ್ನು ಓದಿರಿ.

ನಾವು ನಮ್ಮ ಮನಶ್ಶಾಂತಿಯನ್ನು ಕಳೆದುಕೊಂಡಾಗ ದೇವರು ನಮ್ಮ ಅವಶ್ಯಕತೆಗಳನ್ನು ಕೇಳದೆ ಇರುವ ಕಿವುಡನಲ್ಲ. ಇಸ್ರಾಯೇಲ್ಯರ ವಿಷಯದಲ್ಲಿ ಹೇಳುವುದಾದರೆ ಆತನು ಅವರಿಗೆ ಬೇಕಾದಷ್ಟು ಲಾವಕ್ಕಿಗಳ ಮಾಂಸವನ್ನು ಅವರಿಗೆ ತೃಪ್ತಿಯಾಗುವಷ್ಟು ಒದಗಿಸಿದನು. ಆದರೆ ನಿಜವಾಗಿಯೂ ಇಸ್ರಾಯೇಲ್ಯರಿಗೆ ಮಾಂಸವು ಬೇಕಾಗಿರಲಿಲ್ಲ. ನಮಗೆ ಕಿರಿಕಿರಿಯಾದಾಗ ಮನಶ್ಶಾಂತಿ ಇಲ್ಲದಿರುವಾಗ ಮತ್ತು ನಾವು ಕೋಪಗಂಟಿರುವಾಗ ನಾವು ನಮ್ಮ ಮನಸ್ಸಿನಲ್ಲಿರುವ ಕೋಪದಿಂದ ಸಿಡಿಯುವವರಾಗಿರುತ್ತೇವೆ (ಎದುರು ಬೀಳುವವರಾಗಿರುತ್ತೇವೆ) ಹೊರತು ಅದುವೆ ನಮ್ಮ ಕಲಹಕ್ಕೆ ಕಾರಣವಾಗಿರುವುದಿಲ್ಲ. ನಮಗೆ ಬೇಕಾದುದು ತಪ್ಪಿಹೋದಾಗ, ನಮ್ಮ ಒಳಸಂಬಂಧಗಳ ಮೇಲೆ ಪರಿಣಾಮ ಉಂಟಾದಾಗ ನಾವು ಹೋರಾಡ ತೊಡಗುತ್ತೇವೆ. ಇಸ್ರಾಯೇಲ್ಯರು ದೇವರ ನಡೆಸುವಿಕೆಗೆ ವಿರೋಧವಾಗಿ ತಿರುಗಿ ಬಿದ್ದರು. ನಾವು ಯೋಚಿಸುವುದಕ್ಕಿಂತ ಸುಲಭವಾಗಿ ಹಾಗೆ ತಿರುಗಿ ಬೀಳುವುದರಿಂದ

ತಕ್ಷಣದ ಸಂದರ್ಭ ಸನ್ನಿವೇಶ ಏನೇ ಆಗಿರಲಿ ನಾವು ಈ ವಿಷಯದ ಬಗ್ಗೆ ಎಚ್ಚರ ವಹಿಸಲೇಬೇಕು.

ನಾವು ನಮ್ಮ ಹಿಂದಿನದನ್ನು ಈಗಿನದಕ್ಕಿಂತ ಉತ್ತಮವಾಗಿತ್ತು ಎಂದು ನೆನಪು ಮಾಡಿಕೊಳ್ಳುವುದು ಬಹಳ ಸುಲಭವಾಗಿರುತ್ತದೆ ಏಕೆ?

**ಸೋಮವಾರ** **ಜುಲೈ 5**

## ಇದು ಹರಡುವಂಥದ್ದು (ಸಾಂಕ್ರಾಮಿಕ)

ಅರಣ್ಯಕಾಂಡ 12:1–3 ವಚನಗಳನ್ನು ಓದಿರಿ. ಆರೋನ ಮತ್ತು ಮಿರ್ಯಾಮರು ಯಾವುದರ ಬಗ್ಗೆ ಮನಸ್ಸು ಕೆಡಿಸಿಕೊಂಡಿದ್ದರು?

ಮೋಶೆಯು ಕೂಷ್‌ದೇಶದ ಸ್ತ್ರೀಯನ್ನು ಮದುವೆ ಮಾಡಿಕೊಂಡಿದ್ದನು. ಅದರ ನಿಮಿತ್ತ ಮಿರ್ಯಾಮಳೂ ಆರೋನನೂ ಬಹಿರಂಗವಾಗಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದರು. ಮೋಶೆಯ ಹೆಂಡತಿಯಾದ ಚಿಪ್ಪೋರಳು ಹೊರಗಿನವಳಾಗಿದ್ದಳು– ಅವಳು ಮಿದ್ಯಾನ್ಯನಾದ ಇತ್ರೋನನ ಮಗಳಾಗಿದ್ದಳು (ವಿ.ಕಾಂಡ 3:1ನ್ನು ಓದಿರಿ). ಇಸ್ರಾಯೇಲ್ಯರಲ್ಲಿ 'ಉತ್ತಮ'ರೆನಿಸಿಕೊಂಡವರಲ್ಲೂ ಪತನಗೊಂಡ ಸ್ವಭಾವವು ಒಳ್ಳೆಯ ರೀತಿಯಲ್ಲಿಯಾದರೂ ಪ್ರಕಟವಾಗಲಿಲ್ಲ, ಅದು ಯಾವಾಗಲೂ ಹಾಗೆಯಲ್ಲವೇ?

ಸತ್ಯವೇದ ವಚನವು ಇದನ್ನು ಕೇವಲ ನೆಪವೆಂದು ಸ್ಪಷ್ಟವಾಗಿ ತೋರಿಸುತ್ತದೆ. ಅವರು ಮುಖ್ಯವಾಗಿ ಆರೋಪ ಮಾಡುತ್ತಿರುವುದು ಮೋಶೆಯ ಪ್ರವಾದನಾವರದ ಬಗ್ಗೆ. ಇದರ ಹಿಂದಿನ ಅಧ್ಯಾಯದಲ್ಲಿ ದೇವರು ಮೋಶೆಗೆ ಇಸ್ರಾಯೇಲ್ಯರಲ್ಲಿ 70 ಮಂದಿ ಹಿರಿಯರನ್ನು ತನಗೆ ಸಹಾಯವಾಗುವುದಕ್ಕೆ ಆರಿಸಿಕೊಳ್ಳಲು ಹೇಳಿದನು (ಅ.ಕಾಂಡ 11:16,17,24,25). ಆರೋನ ಮತ್ತು ಮಿರ್ಯಾಮಳೂ ಸಹಾ ಮುಖ್ಯವಾದ ನಾಯಕ ಪಾತ್ರವನ್ನು ವಹಿಸಿದ್ದರು (ವಿ.ಕಾಂಡ 4:13–15 ಮತ್ತು ಮೀಕ 6:4). ಆದರೆ ಹೊಸದಾಗಿ ಆಯ್ಕೆಯಾದ ಹಿರಿಯರ ನಾಯಕತ್ವದ ನಿಮಿತ್ತ ಬೆದರಿಕೆಗೆ ಒಳಗಾಗಿ ಯೆಹೋವನು ಮೋಶೆಯ ಮೂಲಕವಾಗಿ ಮಾತ್ರವೇ ಮಾತಾಡಿದ್ದಾನೋ; ನಮ್ಮ ಮೂಲಕವೂ ಆತನು ಮಾತಾಡಲಿಲ್ಲವೇ ಎಂದು ಹೇಳಿಕೊಂಡರು (ಅ.ಕಾಂಡ 12:2).

ಆರೋನ ಮಿರ್‍ಯಾಮಳು ಮಾಡಿದ ದೂರಿಗೆ ದೇವರು ಹೇಗೆ ಪ್ರತಿಕ್ರಿಯೆ ನೀಡಿದನು? ಅರಣ್ಯಕಾಂಡ 12:1–13 ವಚನಗಳನ್ನು ಓದಿರಿ. ದೇವರು ಹಾಗೆ ನಿರ್ಣಯಾತ್ಮಕವಾಗಿ ಯಾಕೆ ಪ್ರತಿಕ್ರಿಯೆ ನೀಡಿದನು?

ದೇವರ ಪ್ರತಿಕ್ರಿಯೆಯು ಯಾವುದೇ ಸಂದೇಹಕ್ಕೆ ಆಸ್ಪದ ಕೊಡದ ಹಾಗೆ ಕೂಡಲೇ ಪ್ರಕಟವಾಯಿತು. ಪ್ರವಾದನೆಯ ವರವು ಹೆಚ್ಚು ಶಕ್ತಿಯನ್ನು (ಅಧಿಕಾರವನ್ನು) ಪ್ರದರ್ಶಿಸುವ ಅಸ್ತ್ರವಾಗಿರಲಿಲ್ಲ. ಮೋಶೆಯು ನಾಯಕತ್ವಕ್ಕೆ ಸೂಕ್ತವಾದ ವ್ಯಕ್ತಿಯಾಗಿದ್ದನು. ಯಾಕೆಂದರೆ ಆತನು ದೇವರ ಮೇಲೆ ಬಹಳವಾಗಿ ಆತುಕೊಳ್ಳುವುದನ್ನು ಕಲಿತಿದ್ದನು.

ಅ.ಕಾಂಡ 12:1 ವಚನದಲ್ಲಿ ಮಿರ್‍ಯಾಮಳು ಆರೋನನ ಮುಂದೆ ಹೇಳಿದ ಸಂಗತಿಯು ಮೋಶೆಯ ಮೇಲೆ ಆಕ್ರಮಣ ಮಾಡುವ ಪ್ರಚೋದಕಿಯಾಗಿರುವುದನ್ನು ಸೂಚಿಸುತ್ತದೆ. ಆ ಸಂದರ್ಭದಲ್ಲಿ ಆರೋನನು ಇಸ್ರಾಯೇಲ್ಯರಿಗೆ ಮಹಾಯಾಜಕ–ನಾಗಿದ್ದನು. ಆತನಿಗೆ ಕುಷ್ಠ ಹತ್ತಿದ್ದ ಪಕ್ಷದಲ್ಲಿ ಆತನು ದೇವದರ್ಶನದ ಗುಡಾರವನ್ನು ಪ್ರವೇಶಿಸಿ ಜನರ ಪರವಾಗಿ ಸೇವೆ ಮಾಡಲು ಆಗುತ್ತಿರಲಿಲ್ಲ. ದೇವರು ಮಿರ್‍ಯಾಮಳಿಗೆ ತಾತ್ಕಾಲಿಕವಾಗಿ ಶಿಕ್ಷೆಯಾಗಿ ತೊನ್ನು ಉಂಟುಮಾಡಿದದು ಕುಟುಂಬದಲ್ಲಿ ಅಗತ್ಯವಾದ ಮನಪರಿವರ್ತನೆಯು ಇಬ್ಬರಲ್ಲೂ ಉಂಟಾಗಬೇಕೆಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಮೋಶೆಯ ವಿರುದ್ಧ ಸಹ ಗುಣಗುಟ್ಟಿದರೂ ಆತನು ಟೀಕಿಸುತ್ತಾ ಅವಿಶ್ರಾಂತನಾಗಿರುವ ಬದಲು ಮಿರ್‍ಯಾಮಳಿಗೋಸ್ಕರ ಬೇಡುವನಾದನು ಮತ್ತು ಮೋಶೆಯು ಸಹಾ ಮಿರ್‍ಯಾಮಳ ಪರವಾಗಿ ದೇವರಿಗೆ ಪ್ರಾರ್ಥಿಸಿದನು (ಅ.ಕಾಂಡ 12:11–13). ಇಂತಹ ಮನೋಭಾವವು ತನ್ನ ಜನರ ಮಧ್ಯದಲ್ಲಿರಬೇಕೆಂದು ದೇವರು ಬಯಸುತ್ತಾನೆ. ಹಾಗಾಗಿ ದೇವರು ಅವರ ಪ್ರಾರ್ಥನೆಯನ್ನು ಕೇಳಿ ಮಿರ್‍ಯಾಮಳಿಗೆ ತೊನ್ನನ್ನು ವಾಸಿ ಮಾಡುತ್ತಾನೆ.

ನಾವು ಸಭೆಯ ನಾಯಕರಲ್ಲಿ ಯಾವಾಗಲೂ ತಪ್ಪು ಹುಡುಕುವುದು ಸುಲಭವಾದಾಗ್ಯೂ ನಾವು ಅವರ ಮೇಲೆ ದೂರುವ ಬದಲು ಅವರ ಪರವಾಗಿ ದೇವರಲ್ಲಿ ಪ್ರಾರ್ಥಿಸುವುದರಿಂದ ಸಭೆಯ ಮತ್ತು ನಮ್ಮ ಆಧ್ಯಾತ್ಮಿಕ ಜೀವನವು ಎಷ್ಟು ಉತ್ತಮವಾಗಿರುತ್ತದೆಯಲ್ಲವೇ?

ಮಂಗಳವಾರ ಜುಲೈ 6

## ಬಂಡುಕೋರುತನಕ್ಕೆ ನಡೆಸುತ್ತದೆ

ಈ ಕಥೆಯು ಸಕಾರಾತ್ಮಕವಾದ ಟಿಪ್ಪಣಿಯಿಂದ ಆರಂಭವಾಗುತ್ತದೆ. ಇಸ್ರಾಯೇಲ್ಯರು ಅಂತಿಮವಾಗಿ ಕಾನಾನ್‌ದೇಶದ ಗಡಿಯನ್ನು ತಲುಪಿದರು ಮತ್ತು ಹನ್ನೆರಡು ಮಂದಿ ಗೂಢಚಾರರು ಆ ದೇಶವನ್ನು ಸಂಚಾರ ಮಾಡಿ ನೋಡಲು ಕಳುಹಿಸಲ್ಪಟ್ಟರು. ಅವರು ಕೊಟ್ಟ ವರದಿಯು ಬಹಳ ವಿಶೇಷಕರವಾಗಿತ್ತು. ಅರಣ್ಯಕಾಂಡ 13:27–33 ವಚನಗಳಲ್ಲಿ ಬರುವ ಗೂಢಚಾರರ ವರದಿಯನ್ನು ಓದಿರಿ. ಯಾವ ವಿಷಯದಲ್ಲಿ ಇಸ್ರಾಯೇಲ್ಯರ ನಿರೀಕ್ಷೆಯು ನುಚ್ಚು ನೂರಾಯಿತು?

ಕಾಲೇಬನ ಪ್ರೋತ್ಸಾಹದಾಯಕ ಮಧ್ಯಸ್ಥಿಕೆಯಲ್ಲೂ ಅಪನಂಬಿಗಸ್ತರ ಅನುಮಾನ ಸ್ತರ ಸ್ವರಗಳು ಮೀರಿ ನಿಂತವು. ಇಸ್ರಾಯೇಲ್ಯರು ದೇವರು ಅವರಿಗೆ ವಾಗ್ದಾನ ಮಾಡಿದುದನ್ನು ಗೆದ್ದುಕೊಳ್ಳಲು ಸಿದ್ಧರಾಗಿ ಹೊರಡಲಿಲ್ಲ. ಅವರು ವಿಜಯೋತ್ಸಾಹದಿಂದ ಮುನ್ನಡೆಯುತ್ತಾ ಹೋಗುವ ಬದಲು ಹೃದಯದಲ್ಲಿ ಸಮಾಧಾನ ಕಳೆದುಕೊಂಡು ಗೋಳಾಡುವುದಕ್ಕೂ ಗುಣಗುಟ್ಟುವುದಕ್ಕೂ ತೊಡಗಿಕೊಂಡರು.

ನಾವು ನಮ್ಮ ಹೃದಯದಲ್ಲಿ ಸಮಾಧಾನಶಾಂತಿ ಕಳೆದುಕೊಂಡರೆ ನಂಬಿಕೆಯಿಂದ ಮುನ್ನಡೆಯಲು ಕಷ್ಟಪಡುತ್ತೇವೆ. ನಾವು ನೆಮ್ಮದಿಯನ್ನು ಕಳೆದುಕೊಂಡಾಗ ಅದು ನಮ್ಮ ಭಾವನೆಗಳ ಮೇಲೆ ಮಾತ್ರವೇ ಪರಿಣಾಮ ಬೀರುವುದಿಲ್ಲ. ನಮ್ಮಲ್ಲಿರುವ ಅಲ್ಪ ಸಮಾಧಾನಕ್ಕೂ (ನಿದ್ರಾಹೀನತೆಯನ್ನು ಸೇರಿ) ಮತ್ತು ನಮ್ಮ ಕೆಟ್ಟ ಆಯ್ಕೆಗಳಿಗೂ ನೇರವಾದ "ಕಾರಣ ಮತ್ತು ಪರಿಣಾಮಗಳ" ಸಂಬಂಧವಿರುತ್ತದೆಯೆಂದು ವಿಜ್ಞಾನಿಗಳು ಹೇಳುತ್ತಾರೆ. ಇದರಿಂದ ಬೊಜ್ಜುತನ, ವ್ಯಸನಗಳು ಮತ್ತು ಹೆಚ್ಚಿನ ದುಗುಡ ದುಮ್ಮಾನಗಳು ಉಂಟಾಗುತ್ತವೆ.

ಅರಣ್ಯಕಾಂಡ 14:1–10 ವಚನಗಳನ್ನು ಓದಿರಿ. ಮುಂದೆ ಏನಾಯ್ತು?

ಸನ್ನಿವೇಶಗಳು ಕೆಟ್ಟದ್ದರಿಂದ ಇನ್ನೂ ಹೆಚ್ಚು ಕೆಟ್ಟದ್ದಾಗುತ್ತಿವೆ. ಕಾಲೇಬನು ಅವರಿಗೆ ಹತಾಶೆಯಿಂದ "ಯೆಹೋವನು ನಮ್ಮನ್ನು ಮೆಚ್ಚಿಕೊಂಡರೆ ಆ ದೇಶಕ್ಕೆ ನಮ್ಮನ್ನು ಸೇರಿಸಿ ಅದನ್ನು ನಮ್ಮ ಸ್ವಾಧೀನಕ್ಕೆ ಕೊಡುವನು; ಹೀಗಿರುವುದರಿಂದ ಯೆಹೋವನಿಗೆ

ತಿರುಗಿ ಬೀಳಬೇಡಿರಿ" ಎಂದು ಮನವಿ ಮಾಡುತ್ತಾನೆ (ಅ.ಕಾಂಡ 14:9). ಆದರೆ ಜನರು ಅವನ ಮಾತಿಗೆ ಕಿವಿಗೊಡಲಿಲ್ಲ ಇಡೀ ಸಮೂಹವು ತಮ್ಮ ನಾಯಕರ ಮೇಲೆ ಕಲ್ಲೆಸೆಯಲು ಸಿದ್ಧರಾದರು. ಅವರಲ್ಲಿ ಅಸಮಾಧಾನವು ಭುಗಿಲೆದ್ದಿತು ಅವರು ಬಂಡೆದ್ದರು. ಅವರ ಬಂಡೇಳುವಿಕೆ ಅಂತಿಮವಾಗಿ ಮರಣಕ್ಕೆ ಮುನ್ನಡಿಸಿದ.

"ಅಪನಂಬಿಗಸ್ತರಾದ ಗೂಢಚಾರರು ಕಾಲೇಬ ಮತ್ತು ಯೆಹೋಶುವನನ್ನು ಬಹಿರಂಗವಾಗಿ ಗಟ್ಟಿಯಾಗಿ ಅಲ್ಲಗಳೆದರು ಮತ್ತು ಅವರನ್ನು ಕಲ್ಲೆಸೆದು ಕೊಲ್ಲುವಂತೆ ದನಿಯೇರಿಸಿ ಕೂಗಿಕೊಂಡರು. ಹುಚ್ಚುಹಿಡಿದ ಜನಜಂಗುಳಿಯು ಆ ಪ್ರಾಮಾಣಿಕ ವ್ಯಕ್ತಿಗಳನ್ನು ಕೊಲ್ಲಲು ಅಸ್ತ್ರಶಸ್ತ್ರಗಳನ್ನು ಕೈಗೆತ್ತಿಕೊಂಡರು.

ಅವರು ಹುಚ್ಚರಂತೆ ಕೂಗಿಕೊಂಡು ಮುನ್ನುಗ್ಗಿದಾಗ ಕೂಡಲೇ ಯೆಹೋವನ ತೇಜಸ್ಸು ಕಾಣಿಸಿಕೊಂಡಿತು. ಅವರ ಕೈಗಳಲ್ಲಿ ಹಿಡಿದಿದ್ದ ಕಲ್ಲುಗಳನ್ನು ಬಿಟ್ಟು ಬಿಟ್ಟರು. ಎಲ್ಲರೂ ಭಯಪಟ್ಟುಕೊಂಡು ಮೌನರಾದರು. ದೇವರು ಅವರ ಬರ್ಬರ ಕೃತ್ಯವನ್ನು ತಡೆಯಲು ತಾನೇ ಮುಂದಾದನು. ಉರಿಯುವ ಬೆಂಕಿಯಂತೆ ದೇವರ ತೇಜಸ್ಸು ದೇವದರ್ಶನ ಗುಡಾರದಲ್ಲಿ ಕಾಣಿಸಿಕೊಂಡಿತು. ಎಲ್ಲರೂ ದೇವರು ಕೊಟ್ಟ ಸೂಚನೆಯನ್ನು ಗಮನಿಸಿದರು. ಅವರಿಗಿಂತ ಬಲಾಢ್ಯನಾದವನು ಕಾಣಿಸಿಕೊಂಡದ್ದರಿಂದ ಯಾರೂ ತಮ್ಮ ಪ್ರತಿರೋಧವನ್ನು ಮುಂದುವರೆಸಲಿಲ್ಲ. ಕೆಟ್ಟ ವರದಿಯನ್ನು ತಂದ ಆ ಗೂಢಚಾರರು ಭಯಗ್ರಸ್ತರಾಗಿ ತಮ್ಮ ಗುಡಾರಕ್ಕೆ ಓಡಿಹೋದರು"– ಎಲೆನ್ ಜಿ ವೈಟಮ್ಮನವರ 'ನಮ್ಮ ಪಿತೃಗಳು ಮತ್ತು ಪ್ರವಾದಿಗಳು' ಪುಸ್ತಕದಲ್ಲಿ 390ನೇ ಪುಟ.

ಆವಾಗ ದೇವರ ಮಹಿಮೆಯು ಸಾರ್ವಜನಿಕವಾಗಿ ಪ್ರಕಟಗೊಂಡಿತು. ಅರಣ್ಯಕಾಂಡ 14ನೇ ಅಧ್ಯಾಯದಲ್ಲಿ ಈ ಕಥೆಯನ್ನು ಓದುವಾಗ ಇಡೀ ದೃಶ್ಯವೇ ಸ್ತಬ್ಧವಾದಂತೆ ಭಾಸವಾಗುತ್ತದೆ. ಈವಾಗ ದೇವರು ಮೋಶೆಯ ಜೊತೆಗೆ ನಡೆಸುವ ಸಂಭಾಷಣೆಯನ್ನು ಆಲಿಸುತ್ತೇವೆ. ಅವರು ಎಸೆಯಬೇಕೆಂದು ಎತ್ತುಕೊಂಡ ಕಲ್ಲುಗಳು ಮೋಶೆ ಕಾಲೇಬ ಮತ್ತು ಯೆಹೋಶುವನನ್ನು ಕೊಲ್ಲುವ ನಿಮಿತ್ತವಾಗಿದ್ದರೂ ಅಂತಿಮವಾಗಿ ಅವರು ದೇವರ ವಿರೋಧವಾಗಿ ತಿರುಗಿಬಿದ್ದರು.

ಬುಧವಾರ ಜುಲೈ 7

## ಒಬ್ಬ ಮಧ್ಯಸ್ಥ

ಈ ಬಂಡೆದ್ದ ಸಂದರ್ಭದಲ್ಲಿ ದೇವರು ಮೋಶೆಗೆ ಯಾವ ಅವಕಾಶವನ್ನು ಕೊಟ್ಟನು? ಅರಣ್ಯಕಾಂಡ 14:11,12ನ್ನು ಓದಿರಿ.

ದೇವರು ತನಗೆ ತಿರುಗಿಬಿದ್ದ ಇಸ್ರಾಯೇಲ್ಯರನ್ನು ನಾಶಪಡಿಸಿ ನಿನ್ನ ಮೂಲಕ ದೊಡ್ಡ ಜನಾಂಗವನ್ನು ಉಂಟುಮಾಡುತ್ತೇನೆಂದು ಮೋಶೆಗೆ ಹೇಳುತ್ತಾನೆ.

ಮೋಶೆಯು ಕೇವಲ ತನ್ನ ಮೇಲೆ ಎದುರು ಬೀಳದೆ ದೇವರಿಗೆ ಎದುರು ಬಿದ್ದ ಇಸ್ರಾಯೇಲ್ಯರಿಗೆ ಹೇಗೆ ಪ್ರತಿಕ್ರಿಯೆ ನೀಡಿದನು? (ಅರಣ್ಯಕಾಂಡ 14:13–19 ವಚನಗಳನ್ನು ನೋಡಿರಿ).

ಬಾಧೆ ಸಂಕಟಗಳಿಗಾಗಿ ಮಧ್ಯಸ್ಥನಾಗಿ ಪ್ರಾರ್ಥಿಸುವ ಯೇಸುಕ್ರಿಸ್ತನನ್ನು ಎದುರು ನೋಡುವಂಥದ್ದಾಗಿದೆ (ಯೋಹಾನ 17 ಅಧ್ಯಾಯ). ಇಲ್ಲಿ ಮೋಶೆಯು ಇಸ್ರಾಯೇಲ್ಯರ ಪರವಾಗಿ ಏನು ಮಾಡಿದನೋ ಅದನ್ನು ಯೇಸುಕ್ರಿಸ್ತನು ಲೋಕಕ್ಕೆ ಮಾಡಿದುದರ ಉದಾಹರಣೆಯಾಗಿದೆ ಎಂದು ಧರ್ಮಶಾಸ್ತ್ರಜ್ಞರು ಮತ್ತು ಸತ್ಯವೇದಾರ್ಥಿಗಳು ಅಭಿಪ್ರಾಯಪಡುತ್ತಾರೆ. ಅವರ ಅಪರಾಧ ಮನೋಭಾವವನ್ನು ಇನ್ನೂ ಪ್ರಶ್ನಿಸಲೇ ಇಲ್ಲ. ಆಗಲೇ ಮೋಶೆಯು "ಈ ಜನರ ಪಾಪಗಳನ್ನು ಕ್ಷಮಿಸಿದ ಪ್ರಕಾರವೇ ಈಗಲೂ ಮಹಾಕೃಪೆಯಿಂದ ಇವರ ಪಾಪವನ್ನು ಕ್ಷಮಿಸಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆ ಎಂದು ದೇವರಿಗೆ ಪ್ರಾರ್ಥಿಸಿದನು" (ಅರಣ್ಯಕಾಂಡ 14:19). ಮೋಶೆಯ ಮಧ್ಯಸ್ಥಿಕೆಯಿಂದ ಇಸ್ರಾಯೇಲ್ಯರನ್ನು ಹೇಗೆ ಕ್ಷಮಿಸಿದನೋ ಹಾಗೆಯೇ ದೇವರು ಯೇಸುಕ್ರಿಸ್ತನ ಮಧ್ಯಸ್ಥಿಕೆಯಿಂದ ಅಂದರೆ ಅವನ ಮರಣ ಪುನರುತ್ಥಾನ ಮತ್ತು ಮಹಾಯಾಜಕತ್ವದ ಸೇವೆಯಿಂದ ನಮ್ಮನ್ನು ಕ್ಷಮಿಸಿದ್ದಾನೆ.

"ನಾವು ಐಗುಪ್ತದೇಶದಿಂದ ಬಂದದ್ದು ಮೊದಲುಗೊಂಡು ಇದುವರೆಗೆ ನೀನು ಈ ಜನರ ಪಾಪಗಳನ್ನು ಕ್ಷಮಿಸಿದ ಪ್ರಕಾರವೇ ಈಗಲೂ ಮಹಾಕೃಪೆಯಿಂದ ಇವರ ಪಾಪವನ್ನು ಕ್ಷಮಿಸಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆಂದು ಮೋಶೆಯು ದೇವರಿಗೆ ಮೊರೆಯಿಟ್ಟನು" (ಅ.ಕಾಂಡ 14:19). ಬಂಡುಕೋರುತನ ಮತ್ತು ಅಸಮಾಧಾನವು ಹುಟ್ಟುವ ಮೂಲದ ವಿರುದ್ಧ ಕೃಪೆಯು ಹೋರಾಡುತ್ತದೆ. ಕ್ಷಮಾಪಣೆಯು ಹೊಸ ಆರಂಭವನ್ನು ಕೊಡುತ್ತದೆ.

ಆದಾಗ್ಯೂ ಇವುಗಳಿಗೆ ಬೆಲೆ ತೆರಲೇಬೇಕಾಗುತ್ತದೆ. ಕೃಪೆಯು ಯಾವಾಗಲೂ ಅಗ್ಗವಾದುದಲ್ಲ. ಅವರ ಪಾಪಗಳು ಕ್ಷಮಿಸಲ್ಪಟ್ಟಾಗ್ಯೂ ಅವರು ದೇವರಿಗೆ ತಿರುಗಿಬಿದ್ದ ಕಾರಣ ಅದರ ಅನೇಕ ತತ್ಪರಿಣಾಮಗಳನ್ನು ಎದುರಿಸಬೇಕಾಯ್ತು. ಆ ಸಂತತಿಯು ತಮಗೆ ವಾಗ್ದಾನ ಮಾಡಿದ ದೇಶಕ್ಕೆ ಪ್ರವೇಶಿಸಲಾರದೆ ಹೋಯಿತು.

ಇದು ನ್ಯಾಯತೀರ್ಪಿನಂತಿದೆ; ಆದಾಗ್ಯೂ ಇದು ನಿಜವಾಗಿಯೂ ಕೃಪೆಯಾಗಿದೆ. ದೇವರ ಮೇಲೆ ಭರವಸೆಯಿಡುವುದನ್ನು ಇನ್ನೂ ಕಲಿಯದಿದ್ದರೂ ಈ ಸಂತತಿಯು ಕಾನಾನ್ಯರ ಬಲವುಳ್ಳ ಪಟ್ಟಣಗಳನ್ನು ಗೆದ್ದುಕೊಳ್ಳುವುದಕ್ಕೆ ಹೇಗೆ ಸಮರ್ಥವಾಗಿರಲು ಸಾಧ್ಯ? ಅವರೇ ಕತ್ತಲೆಯಲ್ಲಿ ಎಡುವುತ್ತಿರುವಾಗ ಇತರೆ ಜನಾಂಗಗಳಿಗೆ ಅವರು ಬೆಳಕಾಗಿರುವುದು ಹೇಗೆ? ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟಾಗ್ಯೂ ಅವುಗಳ ತತ್ಪರಿಣಾಮಗಳಿಂದ ನೀವು ಯಾವ ಘೋರವಾದ ಪಾಠಗಳನ್ನು ಕಲಿತಿರುವಿರಿ?

**ಗುರುವಾರ** **ಜುಲೈ 8**

## ನಂಬಿಕೆಗೆ ವ್ಯತಿರಿಕ್ತವಾಗಿ ಸ್ವವಿಶ್ವಾಸ

ಅರಣ್ಯದಲ್ಲಿ ಅಲೆಯುತ್ತಿದ್ದ ಇಸ್ರಾಯೇಲ್ಯರಿಗೂ ಯೇಸುಕ್ರಿಸ್ತನು ಎರಡನೇ ಬರೋಣದ ಮುಂಚೆ ಜೀವಿಸುತ್ತಿರುವ ದೇವಜನರಿಗೂ ಯಾವ ಹೋಲಿಕೆಗಳನ್ನು ನೋಡಬಹುದು? (1 ಕೊರಿಂಥ 10:1–11 ವಚನಗಳನ್ನು ನೋಡಿರಿ).

ಚರಿತ್ರೆಯಾದ್ಯಂತ ದೇವಜನರು ಈ ಲೋಕವೆಂಬ ಅಡವಿಯಲ್ಲಿ ಅಲೆಯುತ್ತಾ ದೇವರು ವಾಗ್ದಾನ ಮಾಡಿದ ಪರಲೋಕಕ್ಕೆ ಪ್ರವೇಶಿಸಲು ಪ್ರಯತ್ನ ಮಾಡುತ್ತಿರುತ್ತಾರೆ.

ಈ ಲೋಕವೆಂಬ ಅಡವಿಗೆ ಅನೇಕ ಮುಖಗಳಿವೆ. ಈವಾಗ ಇದು ಕೊನೆಗಾಣದ ಅಡ್ಡಗಟ್ಟೆಯಂತಿದೆ, ಸದಾ ಒಳಬರುವ ಸಂದೇಶದ ಬೀಪ್ ಶಬ್ದಗಳು, ಅತಿ ಆರ್ಭಟವುಳ್ಳ ಮನೋರಂಜನೆಗಳೇ ತುಂಬಿವೆ. ಇದು ಅಶ್ಲೀಲತೆಯನ್ನು ಶುದ್ಧ ಪ್ರೀತಿಯಂಬಂತೆ ಮಾರಾಟ ಮಾಡುತ್ತವೆ ಮತ್ತು ಎಲ್ಲಾ ಸಮಸ್ಯೆಗಳಿಗೂ ಭೌತಿಕ ವಸ್ತುಗಳೇ (ಸುಖಭೋಗಗಳು) ಪರಿಹಾರವೆಂದು ಹೇಳುತ್ತವೆ. ನಾವು ದೈಹಿಕವಾಗಿ ಕೊಂಚ ತಕ್ಕವರಾಗಿದ್ದರೆ, ಕೊಂಚ ಯೌವಸ್ಥರಾಗಿದ್ದರೆ, ಕೊಂಚ ಹೆಚ್ಚೆಂದು ಹೇಳುವಷ್ಟು ಶ್ರೀಮಂತರಾಗಿದ್ದರೆ, ನಮಗೆ ಕೊಂಚ ಚಲುವಿದ್ದರೆ ಸಾಕು ಇವು ನಮೆಲ್ಲ ಸಮಸ್ಯೆಗಳನ್ನು ಪರಿಹರಿಸುತ್ತವೆ.

ಇಸ್ರಾಯೇಲ್ಯರಂತೆಯೇ ನಾವು ಕೂಡ ಮನಸ್ಸಿನ ಸಮಾಧಾನಕ್ಕಾಗಿ ಅವಿಶ್ರಾಂತವಾಗಿ ಹುಡುಕುತ್ತಲೇ ಇದ್ದೇವೆ. ಆದರೆ ಅದನ್ನು ತಪ್ಪಾದ ಸ್ಥಳಗಳಲ್ಲಿ ಕಡುಕೊಳ್ಳುವ ಪ್ರಯತ್ನ ಮಾಡುತ್ತಿರುತ್ತೇವೆ.

ಅರಣ್ಯಕಾಂಡ 14:39–45 ವಚನಗಳಲ್ಲಿ ಇಸ್ರಾಯೇಲ್ಯರು ದೇವರು ಕೊಟ್ಟ ನ್ಯಾಯತೀರ್ಪಿಗೆ ಹೇಗೆ ಪ್ರತಿಕ್ರಿಯೆ ನೀಡಿದರು?

ಇಸ್ರಾಯೇಲ್ಯರು ದೇವರು ಕೊಟ್ಟ ನ್ಯಾಯತೀರ್ಪಿಗೆ ಅವರು ನೀಡಿದ ಪ್ರತಿಕ್ರಿಯೆಯು ವಿಶಿಷ್ಟವಾದುದಾಗಿದೆ. ನಾವು ಪಾಪ ಮಾಡಿರುವುದು ನಿಜ; ಯೆಹೋವನು ವಾಗ್ದಾನ ಮಾಡಿದ ಸ್ಥಳಕ್ಕೆ ಹತ್ತೋಣ ಬನ್ನಿ ಎಂದು ಹೇಳಿಕೊಳ್ಳುತ್ತಾ ಆ ಬೆಟ್ಟದ ಮೇಲಕ್ಕೆ ಹತ್ತಿಹೋಗುವರಾದರು (ಅ.ಕಾಂಡ 14:40).

ಬದ್ಧತೆಯಿಲ್ಲದೆ ಅರ್ಧಮನಸ್ಸಿನಿಂದ ಮಾಡಿದ ಕೆಲಸಗಳೆಲ್ಲಾ ಅಸಮರ್ಪಕವಾಗಿ ಕೊಟ್ಟ ಚುಚ್ಚುಮದ್ದಿನಂತೆ ಯಾವ ಪ್ರಯೋಜನವೂ ಆಗುವುದಿಲ್ಲ. ಇಂದು ವೈದ್ಯರು ಮಗುವು ಹುಟ್ಟಿದ 24 ಗಂಟೆಯೊಳಗೆ ಹೆಪಾಟೈಟಿಸ್ ಬಿ ಚುಚ್ಚು ಮದ್ದನ್ನು ಶಿಫಾರಸ್ಸು ಮಾಡುತ್ತಾರೆ. ಇದು ಸರಿಯಾದ ಆರಂಭ, ಆದರೆ ಇದರ ಜೊತೆಗೆ ಮತ್ತೆ ಎರಡು ಮತ್ತು ಮೂರು ಸಲ ಸರಿಯಾದ ಕಾಲಕ್ಕೆ ಸರಿಯಾದ ಪ್ರಮಾಣದ ಹೆಚ್ಚುವರಿ ಚುಚ್ಚುಮದ್ದನ್ನು ಕೊಡಿಸದೆ ಹೋದರೆ ಹೆಪಾಟಿಟಿಸ್ ಬಿ ಯ ವಿರುದ್ಧ ಯಾವ ಸಂರಕ್ಷಣೆಯೂ ಸಿಗುವುದಿಲ್ಲ.

ಅರಣ್ಯಕಾಂಡ 14ನೇ ಅಧ್ಯಾಯದ ಕಡೆಯ ವಚನಗಳು ಇಸ್ರಾಯೇಲ್ಯರು ದೇವರ ವಿರುದ್ಧವಾಗಿ ಸಂಪೂರ್ಣವಾಗಿ ತಿರುಗಿ ಬಿದ್ದು ಆತನು ಕೊಟ್ಟ ಹೊಸ ಮಾರ್ಗದರ್ಶನಗಳಿಗೆ ಕಿವಿಗೊಡದೆ ಮೋಶೆಯ ನಾಯಕತ್ವವಿಲ್ಲದೆ ಮಂಜೂಷದ ಸಹಾಯವಿಲ್ಲದೆ ಬೆಟ್ಟವನ್ನು ಹತ್ತಲು ಹೋದ ಫಲವಾಗಿ ಅವರಿಗೆ ಮರಣವಾಯಿತು ಮತ್ತು ಆಶಾಭಂಗವಾಯ್ತು.

ದೇವರನ್ನು ಲಘುವಾಗಿ ನೋಡುವ ಭಾವನೆಯು (ಸದರವಾಗಿ) ತುಂಬಾ ದುಬಾರಿಯಾದುದು. ಇದು ನಮ್ಮನ್ನು ಸಾವಿಗೆ ನಡೆಸುತ್ತದೆ. ಅನೇಕ ಸಲ ನಮ್ಮಲ್ಲಿರುವ ಭಯವು ನಮಗೆ ಸ್ವವಿಶ್ವಾಸ ಹುಟ್ಟಿಸುತ್ತದೆ. ಭಯಪಟ್ಟುಕೊಂಡು ಕೆಲವು ತೀರ್ಮಾನ ತೆಗೆದುಕೊಂಡು ನಂತರ ಅದಕ್ಕಾಗಿ ವಿಷಾದ ಪಟ್ಟುಕೊಳ್ಳುತ್ತೇವೆ.

ನೀವು ನಂಬಿಕೆಯಿಂದ ಕಾರ್ಯಮಾಡಿದ ಸಂದರ್ಭಗಳ ಬಗ್ಗೆಯೂ ನಂಬಿಕೆ ಇಲ್ಲದಿದ್ದರೂ ನಿಮ್ಮನ್ನು ನೀವೇ ನೆಚ್ಚುಕೊಂಡು ಸ್ವವಿಶ್ವಾಸದಿಂದ ಮಾಡಿದ ಕಾರ್ಯಗಳ ಬಗ್ಗೆಯೂ ಆಲೋಚಿಸಿರಿ. ಇವುಗಳಲ್ಲಿ ಯಾವ ನಿರ್ಣಾಯಕವಾದ ಭಿನ್ನತೆಯನ್ನು ಕಾಣುತ್ತೇವೆ?

**ಶುಕ್ರವಾರ** **ಜುಲೈ 9**

**ಹೆಚ್ಚಿನ ಚಿಂತನೆ :** ಈವಾಗ ಅವರು ತಮ್ಮ ಪಾಪಕೃತ್ಯಗಳಿಗೆ ಪ್ರಾಮಾಣಿಕವಾಗಿ ಪಶ್ಚಾತ್ತಾಪ ಪಡುವರಂತೆ ಕಂಡರು. ಆದರೆ ಅವರು ತಮಗೆ ಸಂಭವಿಸಿದ ಕೆಟ್ಟ ಫಲಿತಾಂಶಗಳ ನಿಮಿತ್ತವಾಗಿ ದುಃಖಪಟ್ಟರೇ ಹೊರತು ತಮ್ಮ ಅವಿಧೇಯತ್ವವನ್ನೂ ಕೃತಘ್ನತೆಯನ್ನು ಮನಗಂಡವರಾಗಿ ಪಶ್ಚಾತ್ತಾಪಪಡಲಿಲ್ಲ. ದೇವರು ತನ್ನ ಆಜ್ಞೆಗಳನ್ನು ಸಡಿಲಿಸುವುದಿಲ್ಲ ಎಂಬುದನ್ನು ಕಂಡುಕೊಂಡಾಗ ಅವರ ಸ್ವಂತ ಬುದ್ಧಿಯು ಮತ್ತೆ ಸಿಡಿದೇಳುತ್ತದೆ. ಆವಾಗ ಅವರು ಮತ್ತೆ ಅರಣ್ಯಕ್ಕೆ ಹೋಗುವುದಿಲ್ಲವೆಂದು ಘೋಷಿಸಿದರು. ದೇವರು ಅವರು ತೋರಿದ ವಿಧೇಯತ್ವವು ನಿಜವಾದುದಲ್ಲವೆಂದು ಸಾಬೀತುಪಡಿಸಲು ನೀವು ನಿಮ್ಮ ವೈರಿಗಳ ಜಾಗದಿಂದ ದೂರವಿರಿ ಎಂದು ಅವರಿಗೆ ಆಜ್ಞಾಪಿಸಿದನು. ದೇವರಿಗೆ ವಿಧೇಯರಾಗೋಣವೆಂದು ಪ್ರೋತ್ಸಾಹಪಡಿಸಿದ ಗೂಢಚಾರರನ್ನು ಆವೇಶದಿಂದ ಕೊಲ್ಲುವುದಕ್ಕೆ ಹೋದುದು ದೊಡ್ಡ ಪಾಪವೆಂದು ಅರಿತರು. ತಾವು ಮಾಡಿದ ತಪ್ಪಿನ ಫಲಿತಾಂಶವು ತಮಗೆ ಬಹಳ ಅನಾಹುತಕಾರಿ–ಯಾದುದೆಂದು ಮನಗಂಡು ಹೆದರಿಕೊಂಡರು. ಅವರ ಹೃದಯವು ಬದಲಾಗಲಿಲ್ಲ. ಅಂತಹ ಇನ್ನೊಂದು ತಿರುಗಿ ಬೀಳುವ ಸಂದರ್ಭಕ್ಕೂ ಒಂದು ನೆಪವು ಅವರಿಗೆ ಅಗತ್ಯವಾಗಿತ್ತು. ಆಗ ಮೋಶೆಯು ದೇವರು ಕೊಟ್ಟ ಅಧಿಕಾರದಿಂದ "ನೀವು ಬೆಟ್ಟವನ್ನು ಹತ್ತಬೇಡಿರಿ ಅರಣ್ಯಕ್ಕೆ ಹೋಗಿರಿ ಎಂದು ಆಜ್ಞಾಪಿಸುತ್ತಾನೆ"– ಎಲೆನ್ ಜಿ ವೈಟಮ್ಮನವರ "ನಮ್ಮ ಪಿತೃಗಳು ಮತ್ತು ಪ್ರವಾದಿಗಳು" ಎಂಬ ಪುಸ್ತಕದ 319ನೇ ಪುಟ.

ನಂಬಿಕೆಗೆ ಯಾವ ರೀತಿಯಲ್ಲೂ 'ಸ್ವವಿಶ್ವಾಸ' ಸಂಬಂಧಪಡುವುದಿಲ್ಲ. ಯಾರಿಗೆ ನಿಜವಾದ ನಂಬಿಕೆಯಿರುತ್ತದೋ ಆತನು ಮಾತ್ರ ಸ್ವವಿಶ್ವಾಸದ ಅಪಾಯದಿಂದ ಸುರಕ್ಷಿತನಾಗಿರುತ್ತಾನೆ. ಯಾಕೆಂದರೆ ಸ್ವವಿಶ್ವಾಸವೆಂಬುದು ಸೈತಾನನು ನಂಬಿಕೆಗೆ ವಿರೋಧವಾಗಿ ಏರ್ಪಡಿಸಿರುವ ಅಸ್ತ್ರವಾಗಿದೆ ನಂಬಿಕೆಯು ದೇವರ ವಾಗ್ದಾನಗಳನ್ನು

ಬಾಧ್ಯತೆಯಾಗಿ ಪಡೆಯುತ್ತದೆ ಮತ್ತು ವಿಧೇಯತೆಯ ಫಲವನ್ನು ಹೊಂದುತ್ತದೆ. ಸ್ವವಿಶ್ವಾಸವೂ ಸಹ ವಾಗ್ದಾನಗಳ ಬಾಧ್ಯತೆಯನ್ನು ಹೊಂದುತ್ತದೆ. ಆದರೆ ಸೈತಾನನು ದೇವರ ಆಜ್ಞೆಯನ್ನು ಮೀರಿ ನಡೆದುಕೊಂಡುದಕ್ಕೆ ನೆಪವನ್ನು ಹೇಳಿದಂತೆಯೇ ನಾವೂ ಸಹಾ ಮಾಡುತ್ತೇವೆ. ನಂಬಿಕೆಯು ನಮ್ಮ ಆದಿತಂದೆತಾಯಿಗಳು ದೇವರ ಪ್ರೀತಿಯ ಮೇಲೆ ಭರವಸೆಯಿಟ್ಟು ಆತನ ಆಜ್ಞೆಯನ್ನು ಕೈಗೊಳ್ಳುವಂತೆ ಮಾಡುತ್ತಿತ್ತು. ಆದರೆ ಅವರ "ಸ್ವವಿಶ್ವಾಸ"ವು ದೇವರ ಮಹಾಪ್ರೀತಿಯು ತಮ್ಮನ್ನು ಪಾಪದ ಫಲಿತಾಂಶಗಳಿಂದ ಬಿಡಿಸುತ್ತದೆಯೆಂದು ಆತನ ಆಜ್ಞೆಯನ್ನು ಮೀರುವುದಕ್ಕೆ ನಡೆಸಿತು.

ನಾವು ದೇವರು ವಿಧಿಸಿರುವ ನಿಬಂಧನೆಗಳನ್ನು ಪೂರೈಸದೆ ಪರಲೋಕದ ಅನುಗ್ರಹಗಳನ್ನು ಮತ್ತು ಅದು ಕೊಡುವ ಕರುಣೆಯನ್ನು ಬಾಧ್ಯತೆಯಾಗಿ ಹೊಂದುವುದು ನಂಬಿಕೆಯಾಗಿರುವುದಿಲ್ಲ. "ನಮ್ಮ ನಿಜವಾದ ನಂಬಿಕೆಗೆ ಸತ್ಯವೇದದಲ್ಲಿರುವ ವಾಗ್ದಾನಗಳು ಮತ್ತು ಏರ್ಪಾಟುಗಳು ತಳಹದಿಯಾಗಿವೆ"– ಎಲೆನ್ ಜಿ ವೈಟಮ್ಮನವರ 'ದಿ ಡಿಸ್ಯೆರ್ ಆಫ್ ಏಜಸ್' ಪುಸ್ತಕದಲ್ಲಿ 126ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ನಂಬಿಕೆಗೂ, ಸ್ವವಿಶ್ವಾಸಕ್ಕೂ ಇರುವ ವ್ಯತ್ಯಾಸವನ್ನು ಚರ್ಚಿಸಿರಿ. ಕಾನಾನ್ ದೇಶವನ್ನು ಗೆದ್ದು ವಶಪಡಿಸಿಕೊಳ್ಳುವುದು ಮೊದಲಿಗೆ ನಂಬಿಕೆಯ ಕಾರ್ಯವಾಗಿ ಕಾಣುತದೆ. ಆದರೆ ಇಸ್ರಾಯೇಲ್ಯರು ನಂತರ ಮೋಶೆಯ ಮಾತಿಗೆ ವಿರೋಧವಾಗಿ ಅದನ್ನು ವಶಪಡಿಸಿಕೊಳ್ಳಲು ಮಾಡಿದ ಆಕ್ರಮಣವು 'ಸ್ವವಿಶ್ವಾಸದ ಕೃತ್ಯದಂತೆ' ಕಾಣುತ್ತದೆ ಏಕೆ? ಹೇಗೆ ನಮ್ಮ ಉದ್ದೇಶಗಳು ಮತ್ತು ಸನ್ನಿವೇಶಗಳು ನಂಬಿಕೆ ಮತ್ತು ಸ್ವವಿಶ್ವಾಸದ ನಡುವೆ ಇರುವ ವ್ಯತ್ಯಾಸಕ್ಕೆ ಒಂದು ದೊಡ್ಡಾ ಪಾತ್ರವನ್ನು ವಹಿಸುತ್ತವೆ?
2. ನಾವು ನಮ್ಮ ಪಾಪಗಳಿಂದ ಕ್ಷಮಿಸಲ್ಪಟ್ಟರೂ ಅವುಗಳ ದೆಸೆಯಿಂದ ಒದಗುವ ಫಲಗಳನ್ನು ಅನುಭವಿಸುತ್ತಾ ಜೀವಿಸಬೇಕಾಗುತ್ತದೆ. ತಮ್ಮ ಪಾಪಗಳು ಕ್ಷಮಿಸಲ್ಪಟ್ಟಿದ್ದರೂ ತಮ್ಮ ಪ್ರೀತಿಪಾತ್ರರೂ ತಾವೂ ನಕಾರಾತ್ಮಕವಾದ ಬಾಧೆಗಳನ್ನು ಅನುಭವಿಸುತ್ತಾ ಹೋರಾಡುವವರಿಗೆ ನೀವು ಹೇಗೆ ಸಹಾಯ ಮಾಡುವಿರಿ?